ಇ) ಹಾಗಿದ್ದಲ್ಲಿ ಸದರೀ ಗ್ರಾಮದ ಜನತೆಗೆ ಹಾಗೂ ಆ ಮನೆಯ ಜನರಿಗೆ ಏನಾದರೂ ಅಪಾಯವು ಆದಲ್ಲಿ ಅಧಿಕಾರಿಗಳೇ ಜವಾಬ್ದಾರರಾಗುವರೆಂಬುದು ನಿಜವಲ್ಲವೆ ?

ಈ) ಹೀಗಿದ್ದಾಗ ಸದರಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಿ ತಂತಿಯನ್ನು ಬೇರೆಕಡೆಗೆ ಸ್ಥಳಾಂತರಿಸಲು ಕೂಡಲೇ ಸರಕಾರದವರು ಕ್ರಮ ಕೈಗೊಳ್ಳುವರೆ ಹಾಗೂ ಜೀಜಪಾಬ್ದಾರಿಯಿಂದ ಇದುವರೆಗೆ ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಆ) ಇ) ಈ) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು ದೊಡ್ಡ ಮಾಲಂಗಿ ಗ್ರಾಮದ ಶ್ರೀ ದೊಡ್ಡ ಸಿದ್ದಪ್ಪ ಚನ್ನಬಸಪ್ಪ ರಾಮದುರ್ಗರವರ ಮನೆಯ ಮೇಲೆ ವಿದ್ಯುಚ್ಛಕ್ತಿಯ ಯಾವ ಲೈನೂ ಹಾದು ಹೋಗುತ್ತಿಲ್ಲ. ಇವರ ಸಹೋದರರಾದ ಸಣ್ಣ ಸಿದ್ದಪ್ಪನವರ ಮನೆಯ ಮೇಲೆ ಹಾದು ಹೋಗುವ ೪೦೦ ವೋಲ್ಟೇಜಿನ ಲೈನನ್ನು ೧೪-೧೫ ವರ್ಷಗಳ ಹಿಂದೆ ಎಳೆಯಲಾಯಿತೆಂದೂ ವರದಿಯಾಗಿದೆ,

ಸಣ್ಣ ಸಿದ್ದಪ್ಪನವರು ಸುಮಾರು ೨೫ ವರ್ಷದ ಕೆಳಗೆ ತಮ್ಮ ಮನೆಯ ಮುಂಭಾಗವನ್ನು ಹೆಚ್ಚಿಸಿದ್ದರೆಂದೂ ಈ ಹೆಚ್ಚಿಸಿದ ಭಾಗದಲ್ಲಿ ಲೈನು ಹಾದು ಹೋಗುತ್ತದೆಂದೂ ವರದಿಯಾಗಿದೆ. ಈ ಬಗ್ಗೆ ಅವರು ಮನವಿ ಸಲ್ಲಿಸಿ ಅಂದಾಜುಪಟ್ಟಿ ಮಂಡಳಿಗೆ ತುಂಬಿದರೆ ಲೈನನ್ನು ಮಂಡಳಿಯವರು ಸ್ಥಳಾಂತರಿಸುತ್ತಾರೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಸಚಿವರು) — ಮಾನ್ಯ ಬೊಮ್ಮಾಯಿಯವರ ಹೆಸರಿನ ಮುಂದಿರುವ

೧. ೧೯೫೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಶಾಸನದ ೯ನೇ ಕಲಮಿನ ಮೇರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಜಮೀನು ಕಳೆದುಕೊಂಡವರಿಗೆ ಪುನರ್ವಸತಿ ಮಾಡಲು ಮಂಜೂರಾದ ಭೂಮಿಯನ್ನು ನೋಂದಣಿ ಮಾಡಿಸುವ ಸಂಬಂಧದಲ್ಲಿ ಕೊಡಬೇಕಾದ ಸ್ಟ್ಯಾಂಪು ಶುಲ್ಕದಿಂದ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೪ನೇ ಜೂನ್ ೮೮ ರಂದು ಹೊರಡಿಸಲಾದ ಆರ್.ಡಿ. ೬೨ ಇ.ಎಸ್.ಆರ್. ೮೮ (ಪಿ)ನೇ ಕ್ರಮಾಂಕದ ಆದೇಶವನ್ನು ಹಾಗೂ ಈ ಸಂಬಂಧದಲ್ಲಿ ದಿನಾಂಕ ೬ನೇ ಜೂನ್ ೮೮ ರಂದು ಹೊರಡಿಸಲಾದ ತಿದ್ದೋಲೆಯೊಂದಿಗೆ ಸಭೆಯ ಮುಂದಿಡುತ್ತೇನೆ.

೨. ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರಿನ ಮುಂದಿರುವ ೧೯೫೭ನೇ ಇಸವಿಯ ಕೇಂದ್ರ ಮಾರಾಟ ಅಧಿನಿಯಮ ೭೪ (೮)ನೇ ಕಲಮಿನ ಮೇರೆಗೆ ಹೆಲಿಕ್ಯಾಪ್ಟರ್‌ಗಳಿಗೆ ದಿನಾಂಕ ೩೧-೧೨-೧೯೯೦ರ ವರೆಗೆ ಕೇಂದ್ರ ಮಾರಾಟ ತೆರಿಗೆ ವಿನಾಯ್ತಿ ನೀಡುವ ಬಗ್ಗೆ ದಿನಾಂಕ ೭-೫-೧೯೮೮ ರಂದು ಹೊರಡಿಸಲಾದ ಎಫ್‌ಡಿ ೨೩. ಸಿ.ಎಸ್.ಎಲ್. ೮೮ರ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು,—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವಿನಯಂಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಬರಲಿಲ್ಲ,

ಅಧ್ಯಕ್ಷರು —ಪ್ರಶ್ನೋತ್ತರ ವೇಳೆ ಈಗ ಮುಗಿದಿದೆ, ನಾನು ತಮ್ಮನ್ನು ಕರೆದಾಗ ನೀವು ಗೈರು ಹಾಜರಾಗಿದ್ದಿರಿ, ಈಗ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ವಿನಯಂಕುಮಾರ್ ಸೊರಕೆ.—ಹೊಸಬರಿಗೆ ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು.—ನಾನು ಕರೆದಾಗ ನೀವು ಇರಲಿಲ್ಲ, ಈಗ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆಯಲ್ಲಿ ಯಾವ ಸದಸ್ಯರು ಗೈರುಹಾಜರು ಇರುತ್ತಾರೋ ಅಂತಹವರ ಪ್ರಶ್ನೆಯನ್ನು ಪುನಃ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಗೈರು ಹಾಜರಿದ್ದವರಿಗೆ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಇದುವರೆಗೆ ಯಾರಿಗೂ ಆ ರೀತಿ ಅವಕಾಶ ಕೊಟ್ಟಿಲ್ಲ, ಕೊಡುವುದಕ್ಕೂ ಆಗುವುದಿಲ್ಲ, ನೀವು ಕೂಡ್ರಿ. ರೂಲ್ಸ್ ಪ್ರಕಾರ ಒಂದು ಗಂಟೆ ಮಾತ್ರ ಅವಕಾಶವಿದೆ.

ಶ್ರೀ ವಿನಯಕುಮಾರ್ ಸೊರಕೆ.—ಎರಡು ನಿಮಿಷ ಅವಕಾಶ ಕೊಡಿ, ಮಂತ್ರಿಗಳು ಉತ್ತರ ಹೇಳುತ್ತಾರೆ.

ಅಧ್ಯಕ್ಷರು.—ಅದು ಹಾಗೆ ಬರುವುದಿಲ್ಲ. ನಿಮಗೆ ಮಂತ್ರಿಗಳು ಉತ್ತರ ಕಳುಹಿಸಿ ಕೊಡುತ್ತಾರೆ ದಯವಿಟ್ಟು ಕೂಡಿ. ನೀವು ಪುನಃ ಪ್ರಶ್ನೆ ಕೇಳುವುದಕ್ಕೆ ಆಗುವುದಿಲ್ಲ. ಮಂತ್ರಿಗಳು ಉತ್ತರ ಕೊಡುವುದಕ್ಕೆ ಆಗುವುದಿಲ್ಲ, ನಾನು ಆ ರೀತಿ ಅವಕಾಶ ಕೊಡುವುದಿದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದಿದೆ, ನಾನು ನಿಮ್ಮ ಹೆಸರನ್ನು ಕರೆದಾಗ ನೀವು ಗೈರುಹಾಜರು ಇದ್ದಿರಿ, ಈಗ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ರೂಲ್ಸ್ ಏನು ಹೇಳುತ್ತದೆ ಎಂಬುದನ್ನು ತೆಗೆದು ಓದಲೇನು? ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ನೀವು ದಯವಿಟ್ಟು ಕೂಡಿ. ತೊಂದರೆ ಕೊಡುತ್ತಿದ್ದೀರಿ You are interfering in the smooth running of the House. You were absent when I called you.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ. ಮಲ್ಲಪ್ಪ.—ನಿಮ್ಮ ಪಕ್ಷದ ನಾಯಕರು ಹೇಳಿದರೂ ಕೂಡ ನೀವು ಗಮನಿಸಲಿಲ್ಲ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ ನೀವು ಮುಖ್ಯ ಮಂತ್ರಿಗಳ ಬಗ್ಗೆ ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೀರಿ. You may ask for leave on Monday. ಇವತ್ತು ಅರಾಮ್ ಇಲ್ಲವೆಂದು ಹೇಳಿದ್ದಾರೆ ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ ತಮಗೆ ಗೊತ್ತಿರುವ ಹಾಗೆ ಮೊನ್ನೆಯಿಂದ ಇದು ಈ ರೀತಿ ನಡೆಯುತ್ತಿದೆ. ಇದಕ್ಕೆ ಕಾರಣವೇನು ಎಂಬುದು ನಮಗೆ ಗೊತ್ತಾಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಖ್ಯಮಂತ್ರಿಗಳು ಪೌಸನ್ನು ಡಿಸಾಲ್ವ್ ಮಾಡುವ ಬಗ್ಗೆ ಸಮಾಲೋಚನೆ ಮಾಡುತ್ತಿರಬಹುದು ಅವರು ಡಿಸಾಲ್ವ್ ಮಾಡುವುದು ಇದ್ದರೆ ಸದನಕ್ಕೆ ಬರಬಹುದು ಇಲ್ಲೇ ಮಾಡಬಹುದು. ಮನೆಯಲ್ಲಿ ಕುಳಿತು ಏತಕ್ಕೆ ಮಾಡಬೇಕು ?

MR. SPEAKER.—He has asked for leave,

ಶ್ರೀ ಎಂ. ವೀರಪ್ಪ ಮೊಯಿಲಿ.—ಅನಾರೋಗ್ಯದ ಕಾರಣದಿಂದ ಬರುತ್ತಿಲ್ಲವೆಂದರೆ ಸರಿ. ಡಿಸಾಲ್ವ್ ಮಾಡುವ ಯೋಚನೆ ಏನಾದರೂ ಇದ್ದು, ಅದರ ಬಗ್ಗೆ ಸಮಾಲೋಚನೆ ಮಾಡುವುದು ಇದ್ದರೆ ಮನೆಯಲ್ಲಿ ಏತಕ್ಕೆ ಮಾಡಬೇಕು ? ಇಲ್ಲೇ ಕುಳಿತುಕೊಂಡು ಏನು ಬೇಕೋ ಅದನ್ನು ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪತ್ರಿಕೆಗಳಲ್ಲಿ ಬಂದಿರುವ ಪರದಿ ಪ್ರಕಾರ He is consulting all lawyers as to how to dissolve the Assembly.

(ಗೊಂದಲ)

ಅಧ್ಯಕ್ಷರು.—ಅವರು ಅನಾರೋಗ್ಯದ ಕಾರಣವನ್ನು ಹೇಳಿದ್ದಾರೆ. ಅನಾರೋಗ್ಯದ ನಿಮಿತ್ತ ಇವತ್ತು ಮತ್ತು ನಾಳೆ ಬರುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಸೋಮವಾರ I will give an opportunity.

ಶ್ರೀ ಎಂ. ವೀರಪ್ಪ ಮೊಯಿಲಿ.—ಅನಾರೋಗ್ಯದ ಕಾರಣವನ್ನು ಮೊದಲೇ ಹೇಳಿದ್ದರೆ ನಾವು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಲೇ ಇರಲಿಲ್ಲ. ನಾವು ಎಲ್ಲೋ ಅವರು ಡಿಸ್ಸೊಲ್ಯೂಶನ್ ಬಗ್ಗೆ ಥಿಂಕ್‌ಟ್ಯಾಂಕ್‌ನಲ್ಲಿ ಸ್ವಿಮ್ ಮಾಡುತ್ತಿದ್ದಾರೋ ಎಂದುಕೊಂಡಿದ್ದೆವು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ವೈದ್ಯರು ಹೇಳಿದ್ದಾರೆ, ಬರುವುದಕ್ಕೆ ಆಗುವುದಿಲ್ಲ ಎಂದರೆ, ನಿಮಗೆ ಅಷ್ಟು ಕೂಡ ಸೌಜನ್ಯ ಇಲ್ಲ. ನಿಮಗೆ ಕಜ್ಜಿ ತುರಿಸ್ತಾನೇ ಇರುತ್ತದೆ.

ಅಧ್ಯಕ್ಷರು.— ಸೋಮವಾರ ಅಂತ ಹೇಳಿದ್ದೇನೆ. ಸೋಮವಾರ ಅವಕಾಶ ಕೊಡುತ್ತೇನೆ. ಈಗ ಬೇಡ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಹೀಗೆ ಗದ್ದಲ ಮಾಡಿದರೆ ಹೇಗೆ? Nothing will go on record.xx

ಅಧ್ಯಕ್ಷರು.—ನಾನು ಸೋಮವಾರ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ಈ ಕಡೆಯವರು ಇರಲಿ, ಆ ಕಡೆಯವರು ಇರಲಿ. ಈಗ ಶ್ರೀಮತಿ ನಾಗರತ್ನಮ್ಮನವರು ಆಕಸ್ಮಾತ್ ಹೆಲ್ತ್ ಗ್ರೌಂಡ್‌ಮೇಲೆ ಒರುವುದಕ್ಕೆ ಆಗುವುದಿಲ್ಲ ಎಂದರೆ ಏನು ಮಾಡಬೇಕು? ಈಗ ಗಮನ ಸೆಳೆಯುವ ಸೂಚನೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ತಾವು ಹೆಲ್ತ್‌ಗ್ರೌಂಡ್ ಮೇಲೆ ಎಂದು ಹೇಳಿದ ತಕ್ಷಣ ನಾನು ಬಾಯಿಮುಚ್ಚಿಕೊಂಡು ಕುಳಿತುಕೊಂಡೆ. ಆದರೆ ಇವರು ಕಜ್ಜಿ ಆಗಿದೆ, ಇದು ಆಗಿದೆ ಎಂದು ಏನು ತುರಿಯುವುದು? ಇದು ಪೇಪರ್‌ನಲ್ಲಿ ಬಂದಿರುವುದು. ಪೇಪರ್‌ನವರಿಗೆ ಹೋಗಿ ತೋರಿಸಿ ನೀವು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನೋಟೀಸ್ ಕೊಡಿ ನೋಡೋಣ, ಆಮೇಲೆ ಮಾತನಾಡೋಣ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ನೀವು ಮಾತನಾಡಿದ್ದು ರೆಕಾರ್ಡಿಗೆ ಹೋಗಿದೆ. ಹೋಗಬಾರದು ಎಂದು ನಾನು ಹೇಳಿಲ್ಲ.

ಶ್ರೀ ಜೆ.ಹೆಚ್. ಪಟೀಲ್.—ಈಗ ಪತ್ರಿಕೆಯಲ್ಲಿ ಬಂದಿರುವ ವಿಷಯ ನೋಡಿ ಹೇಳುತ್ತಿದ್ದಾರೆ. ವಿಧಾನಸಭೆ ವಿಸರ್ಜನೆ ವಿಷಯದ ಬಗ್ಗೆ ಮುಖ್ಯ ಮಂತ್ರಿಗಳಾಗಲೀ, ಸರ್ಕಾರವಾಗಲೀ, ಪಕ್ಷದವರಾಗಲೀ ಯೋಚನೆಯನ್ನು ಸಹ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ. ಶ್ರೀ ಮಲ್ಲಾರಿಗೌಡ ಮತ್ತು ಆರ್.ಎನ್. ನಾಯಕ್ ಅವರು.

ಶ್ರೀ ಜೆ.ಹೆಚ್. ಪಟೀಲ್.—ಅವರಿಗೆ ಬಹಳ ಬೇಕಾಗಿದ್ದರೆ, ವಿಸರ್ಜನೆ ಆಗಬೇಕೆಂದು ಒತ್ತಾಯ ಇದ್ದರೆ ಅದನ್ನು ಆಮೇಲೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಜರ್ಗೆ.—ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಸೋಮವಾರ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. You can ask for leave on Monday.

ಶ್ರೀ ಎಂ. ವೀರಪ್ಪಮೊಯಿಲಿ.—ವಿಸರ್ಜನೆ ಮಾಡುವುದಿಲ್ಲ ಎಂದು ನೀವು ಗ್ಯಾರಂಟಿ ಕೊಟ್ಟರೆ ಸರಿ.

ಅಧ್ಯಕ್ಷರು.—ನೀವು ಎಷ್ಟು ಕಾತುರರಾಗಿದ್ದೀರಿ ಎಂದು ಅವರು ಮುಖ್ಯ ಮಂತ್ರಿಗಳಿಗೆ ಹೇಳುತ್ತಾರೆ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ. ಮಾನ್ಯ ನಾಯಕ ಅವರೇ, ತಾವು ಗಮನ ಸೆಳೆಯಿರಿ...

ಶ್ರೀ ಆರ್.ಎನ್. ನಾಯಕ್.—ಹೊನ್ನಾವರ ತಾಲ್ಲೂಕಿನಲ್ಲಿ, ಮುಂಡಿ ಮುಂಡಲ್ ಪಂಚಾಯಿತ್‌ಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಕೆಲಸ ಮುಗಿದು...

---

xx(ಅಧ್ಯಕ್ಷರ ಸೂಚನೆಯಂತೆ ದಾಖಲು ಮಾಡಿಕೊಳ್ಳಲಿಲ್ಲ)

ಶ್ರೀ ಆರ್ ರಾಮಯ್ಯ.—ನಮ್ಮದೊಂದು ಕಾಲಿಂಗ್ ಅಟೆನ್‌ಷನ್ ಇದೆ, ಇದನ್ನು ಮೊದಲು ತೆಗೆದುಕೊಳ್ಳಬೇಕು. ಈಗಾಗಲೇ ೫ ಬಾರಿ ಫೋನ್‌ಫೋನ್ ಮಾಡಿದ್ದೀರಿ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಇದೇ ವಿಷಯವನ್ನು ೫ ಸಲ ರೈಸ್ ಮಾಡಿದ್ದೇವೆ, ತಾವು ಅಂಜೆಂಡಾದಲ್ಲೂ ಮೂರು ಸಲ ಹಾಕಿಸಿದ್ದೀರಿ...

ಅಧ್ಯಕ್ಷರು.—ಇವತ್ತೇ ಉತ್ತರ ರೆಡಿ ಇದೆ, ಮಿನಿಸ್ಟರು ಬರುತ್ತಾರೆ, ಇವತ್ತೇ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ರಾಮದಾಸ್, ನಾನು, ಪೂಜಾಪತಿ, ರಾಮಯ್ಯ ಮತ್ತು ಖರ್ಗೆಯವರು ಸೇರಿ ಕೊಟ್ಟಿರತಕ್ಕ ಗಮನ ಸೆಳೆಯುವ ಸೂಚನೆ...

ಅಧ್ಯಕ್ಷರು.—ನನ್ನ ಚೇಂಬರಿಗೆ ಕರೆಸಿ ಹೇಳಿದ್ದೇನೆ, ಮಿನಿಸ್ಟರು ಬರುತ್ತಾರೆ, ಇವತ್ತೇ ಉತ್ತರ ಕೊಡಿಸುತ್ತೇನೆ. ಮಾನ್ಯ ನಾಯಕ್ ಅವರ ಕಾಲಿಂಗ್ ಅಟೆನ್‌ಷನ್ ಪ್ರಾರಂಭ ಮಾಡಲಿ, ಇವತ್ತೇ ನಿಮಗೆ ಉತ್ತರ ಕೊಡಿಸುತ್ತೇನೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಒಂದು ಸಾರಿ ಹೇಳಿದಿರಿ, ಕೇಳಿದ್ದೇವೆ, ಎರಡು ಸಾರಿ ಹೇಳಿದಿರಿ, ಕೇಳಿದ್ದೇವೆ. ಮತ್ತೆ ಅಜೆಂಡಾದಲ್ಲಿ ಮೂರು ಸಾರಿ ಹಾಕಿದ್ದೀರಿ. ಮತ್ತೆ ಈಗಲೂ ಮುಂದಕ್ಕೆ ಹಾಕಿಂವುದು ಎಂದರೆ ಏನರ್ಥ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ವಿಧಾನ ಪರಿಷತ್ತಿನಲ್ಲಿ ಸನ್ಮಾನ್ಯ ಚೊಮ್ಮಾಯಿಯವರು ಉತ್ತರ ಹೇಳುತ್ತಿದ್ದಾರೆ. ಈ ಕಾಲಿಂಗ್ ಅಟೆನ್‌ಷನ್ ಮುಗಿಯುವುದರೊಳಗಾಗಿ ನಾನು ಕರೆಸುವಂಥ ವ್ಯವಸ್ಥೆ ಮಾಡುತ್ತೇನೆ. ಒಂದು ವೇಳೆ ಇವತ್ತೇ ಆಗದೇ ಹೋದರೆ, ನಾಳೆ ಖಡಾಖಂಡಿತವಾಗಿ ಉತ್ತರ ಕೊಡಿಸುವ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಚಿತ್ರದುರ್ಗ ಜಿಲ್ಲೆಯ, ಹೊಸದುರ್ಗ ತಾಲ್ಲೂಕಿಗೆ ಸಂಬಂಧಪಟ್ಟಿದ್ದು, ಇದೇನೂ ಬಹಳ ದೂರ ಇಲ್ಲ. ಬಹಳ ಮುಖ್ಯವಾದ ವಿಚಾರ. ಇದೇ ವಿಚಾರವನು ೪-೫ ಸಲ ರೈಸ್ ಮಾಡಿದ್ದೇವೆ. ಈ ರೀತಿ ಮುಂದಕ್ಕೆ ಹಾಕಿದರೆ, ಈ ಮನೆಗೆ ಮಹತ್ವ ಇಲ್ಲವೇ ? ಈ ಸದನದಲ್ಲಿ ಇಂತಹ ವಿಷಯವನ್ನು ಎತ್ತಬಾರದೇ...

ಅಧ್ಯಕ್ಷರು.—ತಾವು ಹೇಳುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇವತ್ತೇ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ. ಈಗ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಅಲ್ಲಿಂದ ಬಂದಕೂಡಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಆರ್. ರಾಮಯ್ಯ.—ಈ ಕಾಲಿಂಗ್ ಅಟೆನ್‌ಷನ್ ಮುಗಿಯುವುದರೊಳಗಾಗಿ ಅವರನ್ನು ಕರೆಸಬೇಕು. ಹಿಂದುಳಿದ ವರ್ಗದವರ ಮೇಲೆ ಹಲ್ಲೆ ನಡೆಸಿರುವ ವಿಚಾರ ಇದು ಇವತ್ತು ಅವರ ನೋವನ್ನು ತಾವೂ ತಿಳಿದುಕೊಳ್ಳಬೇಕು. ಅವರಿಗೇನಾದರೂ ಅನುಕಂಪ ಬೇಡವೇ ? ಅಂತಹ ಒಂದು ಪ್ರಶ್ನೆಯನ್ನು ಕೇಳಿದರೆ, ತಾವು ನಾಳೆ, ನಾಡಿದ್ದು ಎಂದು ಮುಂದಕ್ಕೆ ಹಾಕಿದರೆ, ಏನರ್ಥ.

ಅಧ್ಯಕ್ಷರು.—ಇವತ್ತೇ ಉತ್ತರ ಕೊಡಿಸುತ್ತೇನೆ. ಈಗ ನಾಯಕ್ ಅವರೇ ತಮ್ಮ ಗಮನ ಸೆಳೆಯುವ ಸೂಚನೆ ಕೇಳಿ...